# ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿತು ತಲಚೇರಿಯಲ್ಲಿ

18

ಪ್ಲಾಂಟರ್ ಸೋಮಣ್ಣನವರ ಅತಿಥಿಗೃಹದಲ್ಲೇ ಕಾಲಕಳೆಯುತ್ತಿದ್ದ ಪ್ರೊ. ಭಾಸ್ಕರ್ ವಿಪರೀತ ಕುಡಿಯುತ್ತಿದ್ದರು. ಶೀಲಾಳ ಕೊಲೆ ನಡೆದು ಆದಾಗಲೇ ಹತ್ತಾರು ದಿನಗಳು ಕಳೆದುಹೋಗಿದ್ದುವು. ನಟರಾಜ್, ತಾವು ಸಂಗ್ರಹಿಸಿದ ಮಾಹಿತಿಗಳಲ್ಲಿ ಕೆಲವನ್ನು ಪ್ರೊ. ಭಾಸ್ಕರ್‌ರ ಮನಸ್ಸಿಗೆ ಹಿತವಾಗುವಂತೆ ತಿಳಿಸುತ್ತ, 'ದೀಪೂವನ್ನು ಪತ್ತೆ ಹಚ್ಚುವ ದಿನ ದೂರವಿಲ್ಲ' ಎಂಬುದಾಗಿ ಸಮಾಧಾನ ಹೇಳಿ ತಾವು ಮಾರನೆಯ ದಿನ ಕೇರಳಕ್ಕೆ ಹೋಗುವುದಾಗಿ ತಿಳಿಸಿದರು.

'ನಾನೂ ಬರ್ತೇನೆ ನಟರಾಜ್. ಅವ ನನ್ನ ಕೈಗೆ ಸಿಗಬೇಕು. ನಾನು ಯಾರೂಂತ ಗೊತ್ತು ಮಾಡಿಸ್ಬೇಕು ಅವನಿಗೆ. ನೀವಲ್ಲ ನಟರಾಜ್, ಅವನನ್ನು ನೋಡಿಕೊಳ್ಳೋದಕ್ಕೆ ನಾನು ಸಾಕು. ನಾನೊಬ್ನೇ ಸಾಕು.'

ಪ್ರೊ. ಭಾಸ್ಕರ್ ಹಲ್ಲು ಕಡಿಯುತ್ತ 'ಐ ವಿಲ್ ಕಿಲ್ ಹಿಮ್' ಎಂದು ಗರ್ಜಿಸತೊಡಗಿದರು. ಆಗ ನಟರಾಜ್‌ರು 'ಆ ಮಾತನ್ನು ನೀವು ಹೇಳಬಾರದು ಪ್ರೊ. ಭಾಸ್ಕರ್. ಅದಕ್ಕೆ ಪೊಲೀಸ್ ಖಾತೆ ಇದೆಯಲ್ಲ. ಕಾನೂನನ್ನು ಕೈಗೆ ತೆಗೆದುಕೊಳ್ಳಲು ನಾವು ಯಾರು?' ಎಂದರು.

'ನಾವ್ಯಾರು, ನೀವ್ಯಾರು ಅನ್ನೋ ಪ್ರಶ್ನೇನೇ ಇಲ್ಲ. ಹಾಗಿದ್ರೆ ನೀವ್ಯಾಕೆ ನಿಮಗೆ ಸಂಬಂಧವಿಲ್ಲದ ಕೆಲಸಕ್ಕೆ ಹೊರಟಿದ್ದೀರಿ?'

'ಇದು ನಿಮ್ಮ ವಿಚಾರವಾದ ಕಾರಣ. ನಿಮ್ಮಂತಹ ಹಿರಿಯ ವಿಜ್ಞಾನಿಗೆ ಹೀಗೊಂದು ಅನ್ಯಾಯವಾದದ್ದನ್ನು ಕಂಡೂ ಸುಮ್ಮನಿರುವುದು ನನ್ನಿಂದಾಗಲಿಲ್ಲ. ಈಗಲೂ ನಿಮಗೆ ಬೇಡಾಂತಿದ್ದರೆ ಹಿಂದೆ ಸರಿಯುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನನಗೆ ಮಾಡೋದಕ್ಕೆ ಬೆಟ್ಟದಷ್ಟು ಕೆಲಸಗಳಿವೆ.'

'ನೋ ನೋ. ನಾನು ಹಾಗೆ ಹೇಳಿದ್ದಲ್ಲ. ನನಗೆ ಪೊಲೀಸರನ್ನು ಕಂಡ್ರೆ ಆಗೋದಿಲ್ಲ. ಅವರೆಲ್ಲ ನಾನ್ಸೆನ್ಸ್ ಜನಗಳು. ಯಾರೋ ತಪ್ಪು ಮಾಡಿದ್ರೆ ಇನ್ಯಾರಿಗೋ ಹಿಂಸೆ ಕೊಡ್ತಾರೆ. ಅಂಥವರು. ಹೇಗೂ ಸ್ವಲ್ಪ ಕಾಲ ನೀವಿಲ್ಲೇ ಇರ್ತೀರಲ್ಲ. ಇದನ್ನು ನೀವೇ ಕಂಡು ಹಿಡೀಬೇಕು. ಪ್ಲೀಸ್. ನನ್ನ ಶೀಲಾಳಿಗೆ ನ್ಯಾಯ ಕೊಡಿಸೋದು ನಿಮ್ಮಿಂದ ಸಾಧ್ಯ. ಮುಂದೆ ಏನಾಗುತ್ತೋ ಆಮೇಲೆ ನೋಡೋಣ. ಆದ್ರೆ ಶೀಲಾಳ ಮೇಲೆ ಕೈಮಾಡಿದವ ನನ್ನ ಕೈಯಿಂದ್ಲೇ ಸಾಯಬೇಕು' – ಪ್ರೊ. ಭಾಸ್ಕರ್ ನಡುಗುತ್ತಿದ್ದರು.

'ದೀಪೂ ಹಾಗೆ ಮಾಡಿದ್ದಾನೆ ಅನ್ನೋದಕ್ಕೆ ಸರಿಯಾದ ಸಾಕ್ಷ್ಯಾಧಾರಗಳು ಇನ್ನೂ ಸಿಕ್ಕಿಲ್ಲ. ಮೇಲಾಗಿ ಪವನ್ ಹಾಗೂ ಗಣೇಶ್, ಇಬ್ಬರೂ ಅಪರಾಧಿ ಸ್ಥಾನದಲ್ಲಿದ್ದಾರೆಂಬುದು ಗೊತ್ತು ತಾನೆ?'

'ಡಾ. ಗಣೇಶ್? ಏನು ಹೇಳ್ತಾ ಇದ್ದೀರಿ ಮಿ. ನಟರಾಜ್!'

'ಹೌದು ಪ್ರೊಫೆಸರ್. ಡಾ. ಗಣೇಶ್ ಅರೆಸ್ಟಾಗಿದ್ದಾರೆ. ಆದರೆ ಸತ್ಯ ಬಹಿರಂಗವಾಗೋ ತನಕ ಏನನ್ನೂ ಹೇಳುವಂತಿಲ್ಲ. ನೀವು ಸಮಾಧಾನವಾಗಿರಿ. ಎಲ್ಲಕ್ಕೂ ಪರಿಹಾರ ಎಂಬೋದು ಇದ್ದೇ ಇದೆ.'

'ವಾಟ್ ಡೂ ಯು ಮೀನ್ ಬೈ ದಟ್ ಮಿ. ನಟರಾಜ್! ಏನು ಹೇಳ್ತಾ ಇದ್ದೀರಿ? ಸಮಾಧಾನ!'

'ಯಾರಿಗೆ ಸಮಾಧಾನ? ಡಾಕ್ಟರನ್ನು ಜೈಲಿಗೆ ಹಾಕಿದ್ರೆ ನನಗೆ ಸಮಾಧಾನನಾ? ಪಾಪ, ಎಷ್ಟು ದಿನಗಳಾದುವು ನನ್ನ ಹಿಂದೆ ಮುಂದೆ ಇದ್ದು ಸೇವೆ ಮಾಡೋದು?'

'ನಿಮ್ಮ ಸ್ಥಿತಿ ನನಗೆ ಅರ್ಥವಾಗ್ತಿದೆ ಪ್ರೊಫೆಸರ್. ಅದಕ್ಕಾಗಿಯೇ ನನ್ನ ಕೈಲಾದ ಪ್ರಯತ್ನ ಮಾಡೋದಕ್ಕೆ ಹೊರಟಿದ್ದೇನೆ. ಯಾರಿಗೂ ಅನ್ಯಾಯ ಆಗ್ಬಾರದು. ಪೊಲೀಸರಿಗೆ ಆದಷ್ಟೂ ಹೆಚ್ಚಿನ ಸಹಕಾರ ಕೊಡೋಣ.'

'ನೋ ನಟರಾಜ್, ಪೊಲೀಸರಿಂದ ಏನೂ ಕಿಸಿಯೋಕಾಗಲ್ಲ. ಅವರು ವಕ್ರಮಾರ್ಗ

